ಕಥೆ

 

ಮೂಲ ಮಲಯಾಳಂ: **ಕಮಲಾದಾಸ್**

ಕನ್ನಡಕ್ಕೆ: **ಕೆ.ಕೆ. ಗಂಗಾಧರನ್**

ಕಲೆ: ವೆಂಕಟ್ರಮಣ ಭಟ್

# ಹೊಸ ಅಮ್ಮ



ಅವನು ರಸ್ತೆಯ ಎಡಭಾಗದಲ್ಲಿ ಕಾರನ್ನು ನಿಲ್ಲಿಸಿದ. ನಂತರ ಅದೇ ದಿಕ್ಕಿನ ಕಾರಿನ ಬಾಗಿಲಿನಿಂದ ತನ್ನ ಪತ್ನಿಯನ್ನು ಹೊರಕ್ಕಿಳಿಸಿದ.

ಉಯ್ಯಾಲೆಯಲ್ಲಿ ಮೇಲೇರಿ ಕೆಳ ಬರುವಂತಹ ಒಂದು ರೀತಿಯ ಪುಳಕವನ್ನು ಆಕೆಗೆ ನಿಡಿದ.

ಅವರಿಬ್ಬರೂ ನವದಂಪತಿ. ವಾಸ್ತವತೆಯನ್ನು ಮರೆಮಾಚಿ ಹಿಂದಿನ ದಿನ ಹೋಟೆಲಿನಲ್ಲಿ ತೀವ್ರಶ್ರಮ ನಡೆಸಿದ್ದರು. ಅದರ ನೆನಪುಗಳು ಅವಳನ್ನು ನಾಚುವಂತೆ ಮಾಡಿದವು.

'ಮಗುವಿನ ಮುಂದೆ ನೀವು ನನ್ನನ್ನು ಮುಟ್ಟಬಾರದು. ಮಗುವಿಗೆ ಅದು ಇಷ್ಟವಾಗಲಾರದು...' ಅವಳು ಎಚ್ಚರಿಸಿದಳು.

'ಅದೋ ಆ ಕಾಣಿಸುವುದೇ ಕಾನ್ವೆಂಟಿನ ಗೇಟು. ಬೋರ್ಡಿಂಗ್ ರಸ್ತೆಯಿಂದ ಕಾಣಲು ಸಾಧ್ಯವಾಗದು. ಅದು ಮುಖ್ಯ ಕಟ್ಟಡದ ಹಿಂಬದಿಯಲ್ಲಿದೆ.' ಗಂಡ ಕೆಂಪುರತ್ನವಿರುವ ಉಂಗುರ ಧರಿಸಿದ ಬೆರಳಿನಿಂದ ಆ ಕೆಂಪು ಕಟ್ಟಡವನ್ನು ಹೆಂಡತಿಗೆ ತೋರಿಸಿದ.

ಕಮಾನಿನಾಕಾರದ ಕಬ್ಬಿಣದ ಗೇಟಿನ ಎದುರಿನಲ್ಲಿ ಕ್ರಿಸ್ತನ ಪವಿತ್ರಮಾತೆಯ ಬೆಣಚುಗಲ್ಲಿನ ಪ್ರತಿಮೆ ತಲೆಯೆತ್ತಿ ನಿಂತಿತ್ತು. ಎಡಗೈಯಲ್ಲಿ ಮಗು, ಬಲಗೈಯಲ್ಲಿ ಹಾರಲು ಸಿದ್ಧವಾಗಿ ನಿಂತಿರುವ ರೆಕ್ಕೆ ಅರಳಿಸಿದ ಪಾರಿವಾಳವನ್ನು ಹೊತ್ತು ನಿಂತ ಕನ್ಯಾಮೇರಿಯು ಕಾಣಿಸುತ್ತಿದ್ದಳು.